**2 ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ದೇವನಹಳ್ಳಿ**

**ಸಿ.ಸಿ ನಂ. 2655/2018**

ಹೆಸರುಃ ನಂಜೆಗೌಡ

ತಂದೆ ಹೆಸರುಃ ಕೃಷ್ಣಮೂರ್ತಿ

ವಯಸ್ಸುಃ 36 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ರಾಮನಾಥಪುರ

**PW-2, CW-3**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 12-06-2026**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿರವರಿಂದಃ**

ಚಾಸಾ 1 ನನ್ನ ತಾಯಿ. ಚಾಸಾ 2 ನನ್ನ ಸಹೋದರಿ. ಚಾಸಾ 4 ರಿಂದ 7 ರವರೆಗಿನವರ ಪರಿಚಯ ಇದೆ. ಆರೋಪಿತರು ನನಗೆ ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಆರೋಪಿಗಳಿಂದ ನನಗೆ ಯಾವುದೇ ಹಲ್ಲೆ ಆಗಿಲ್ಲ. ಈ ಸಂಬಂಧ ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿಗಳು ಕೈಯಿಂದ ನನ್ನ ಮೇಲೆ ಹಲ್ಲೆ ಮಾಡಿಲ್ಲ, ಗುದ್ದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಮಾನ್ಯ ಸ.ಸ.ಅ ರವರು ಕೋರಿದ್ದು ಸಾಕ್ಷಿಯು ಅಭಿಯೋಜನ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವ ಕಾರಣ ಮಾನ್ಯ ಸ ಸ ಅ ರವರ ಕೋರಿಕೆಯನ್ನು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದ**

ದಿ.12-04-2018 ರಂದು ಸುಮಾರು 4.00 ಗಂಟೆ ಸಮಯದಲ್ಲಿ ರಾಮನಾಥಪುರ ಗ್ರಾಮದ ಸರ್ವೆ ನಂ.13/3 ರ ಜಮೀನಿನ ಹತ್ತಿರ ನಾನು, ಚಾಸಾ-1 ಮತ್ತು 2 ರವರು ಜಮೀನಿನ ಹತ್ತಿರ ಹೋದಾಗ ಆರೋಪಿತರು ಅಕ್ರಮವಾಗಿ ಗುಂಪು ಕಟ್ಟಿಕೊಂಡು ನಮ್ಮನ್ನು ಅಡ್ಡಗಟ್ಟಿ ತಡೆದು ಬಾಯಿಗೆ ಬಂದಂತೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಕೈಯಿಂದ ಹೊಡೆದು, ಜಮೀನಿನಿಂದ ಆಚೆ ಹೋಗು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-2 ರವರಿಗೆ ಕೈಯಿಂದ ಹೊಡೆದು ಜಮೀನಿನಿಂದ ಆಚೆ ತಳ್ಳಿರುತ್ತಾರೆ ಎಂದರೆ ಸರಿಯಲ್ಲ. 3 ರಿಂದ 5 ನೇ ಆರೋಪಿತರು ನನಗೆ ಕೈಯಿಂದ ಹೊಡೆದು ಕಾಲಿನಿಂದ ಹೊಡೆದು ನೋವುಂಟು ಮಾಡಿರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 5 ನೇ ಆರೋಪಿತರು ನಮಗೆ ಇನ್ನೊಂದು ಸಾರಿ ಈ ಜಮೀನಿನ ಹತ್ತಿರ ಬಂದರೆ ನಮ್ಮನ್ನು ಅಲ್ಲಿಯೇ ಹೂತುಹಾಕುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಈ ಸಂಬಂದ ದಿ. 16-04-2018 ರಂದು ಈಗ ನನಗೆ ಓದಿ ಹೇಳಿದಂತೆ 'ನಾನು ----- ಕೋರುತ್ತೇನೆ' ಎಂದು ಪೋಲಿಸ್ ರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೇ ಸರಿಯಲ್ಲ. ಹೇಳಿಕೆಯ ಭಾಗವನ್ನು ನಿಪಿ-3 ಎಂದು ಗುರುತಿಸಲಾಯಿತು.

ಈ ಪ್ರಕರಣದ ಬಗ್ಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತರು ನನ್ನ ಸಂಬಂದಿಕರಾದ ಕಾರಣ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಎ ಒಪ್ಪಲಾಗಿದೆ.

ಎರಡನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್ ಸಿ.,

ದೇವನಹಳ್ಳಿ.